72

# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಎಸ್.ವಿ. ಸಂಕನೂರು ಇವರು ನಿಯಮ-72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಉನ್ನತ ಶಿಕ್ಷಣ ಸಚಿವರ ಉತ್ತರ.

**ವಿಷಯ:-**

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ "ಸಿ" ವೃಂದದಲ್ಲಿರುವ ಅಸಿಸ್ಟಂಟ್ ಲೆಕ್ಚರರ್ ಹಾಗೂ ಸಿಸ್ಟಂ ಅನಾಲಿಸ್ಟ್ ಇವರುಗಳಿಗೆ AICTE ವೇತನ ಶ್ರೇಣಿ ನೀಡಿ, ಗ್ರಂಥಪಾಲಕರಿಗೆ ನೀಡದೇ, ತಾರತಮ್ಯ ಮಾಡಿ ಅನ್ಯಾಯ ಮಾಡಿರುವುದನ್ನು ಸರಿಪಡಿಸುವ ಬಗ್ಗೆ.

**ಉತ್ತರ:-**

ಸರ್ಕಾರದ ಆದೇಶ ಸಂಖ್ಯೆ:ಇಡಿ/79/ಡಿಟಿಇ/1991 ದಿನಾಂಕ:18.07.1994ರಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಇಂಜಿನಿಯರಿಂಗ್, ಮಾನವಶಾಸ್ತ್ರ ಮತ್ತು ವಿಜ್ಞಾನ ವಿಷಯಗಳ ಅಧ್ಯಾಪಕರುಗಳಿಗೆ ಕೆಲವು ನಿಬಂಧನೆ ಮತ್ತು ಷರತ್ತಿಗೊಳಪಟ್ಟು, ಮೊದಲ ಬಾರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ದಿನಾಂಕ:01.04.1993 ರಿಂದ ಅನ್ವಯವಾಗುವಂತೆ ವಿಸ್ತರಿಸಲಾಗಿದೆ. ಸದರಿ ಆದೇಶದಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 'ಬಿ' ವೃಂದದ ಅಧ್ಯಾಪಕರುಗಳಿಗೆ ಮಾತ್ರ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. 'ಸಿ' ವೃಂದದಲ್ಲಿ ರಾಜ್ಯ ವೇತನ ಶ್ರೇಣಿ ರೂ.1720-3170 ಹಾಗೂ ರೂ.1400-2750ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲು ಅವಕಾಶವನ್ನು ಕಲ್ಪಿಸಿರುವುದಿಲ್ಲ. ಅದರಂತೆ, ಪಾಲಿಟೆಕ್ನಿಕ್ ಗ್ರಂಥಪಾಲಕರು ಮತ್ತು ಸಿಸ್ಟಂ ಅನಾಲಿಸ್ಟ್ ಹುದ್ದೆಗಳು ಗ್ರೂಪ್ 'ಸಿ' ರಾಜ್ಯ ವೇತನ ಶ್ರೇಣಿಯ ಹುದ್ದೆಗಳಾಗಿದ್ದು, ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿರುವುದಿಲ್ಲ.

ಮುಂದುವರೆದು, ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ವೃಂದದವರಿಗೆ ಕಾಲಕಾಲಕ್ಕೆ ಎಐಸಿಟಿಇ ವೇತನ ಶ್ರೇಣಿಗಳನ್ನು ಪರಿಷ್ಕರಿಸಲಾಗಿರುವ ಸರ್ಕಾರದ ಆದೇಶಗಳಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

> **Coverage:** "The AICTE Scales of Pay and Scheme thereto applies only to the teachers of Government and Aided Polytechnics/Institutions in the state in Engineering subjects, Humanities and Science."
>
> **Applicability of the Scheme:**
>
> (1) The Government shall not extent the AICTE pay scales to any of its employees except those having coverage under these orders.
>
> (ii) This scheme does not extend to the posts of professionals like System Analysts, Senior Analysts, Research Officers, etc.

ಅದರಂತೆ, ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಅಧ್ಯಾಪಕ ವೃಂದದವರಿಗೆ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾದ 1986, 1996, 2006 ಮತ್ತು 2016ರ ಎಐಸಿಟಿಇ/ಸರ್ಕಾರದ ಆದೇಶಗಳಲ್ಲಿ ಅಧ್ಯಾಪಕ ವೃಂದದಲ್ಲಿರುವವರಿಗೆ ಮಾತ್ರ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾಗಿದ್ದು, ಸಿಸ್ಟಂ ಅನಾಲಿಸ್ಟ್ ಮತ್ತು ಗ್ರಂಥಪಾಲಕರ ಹುದ್ದೆಗಳಿಗೆ ಎಐಸಿಟಿಇ ವೇತನ ಶ್ರೇಣಿ ವಿಸ್ತರಿಸಿರುವುದಿಲ್ಲ.

1964ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಇಂಜಿನಿಯರಿಂಗ್ ವಿಭಾಗಗಳಲ್ಲಿ ಚಾಲ್ತಿಯಲ್ಲಿದ್ದ ಸಹಾಯಕ ಉಪನ್ಯಾಸಕರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 241 ಟಿಪಿಇ 82, ದಿನಾಂಕ:11.06.1986ರಲ್ಲಿ ರದ್ದುಗೊಳಿಸಿದ್ದು, ಆ ದಿನಾಂಕದಂದು ಸಹಾಯಕ ಉಪನ್ಯಾಸಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳಿಗೆ ಅವರು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ ಐದು ವರ್ಷಗಳನ್ನು ಪೂರೈಸಿದಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಉಪನ್ಯಾಸಕರ ಹುದ್ದೆಗೆ (ವೃಂದ ಬಿ) ಮುಂಬಡ್ತಿ ನೀಡಿ/ಮೇಲ್ದರ್ಜೆಗೇರಿಸಿ, ಎಐಸಿಟಿಇ ನಿಯಮಾನುಸಾರ ನಿಗದಿತ ವಿದ್ಯಾರ್ಹತೆಯನ್ನು ಹೊಂದಿದಲ್ಲಿ, ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ, ವಿದ್ಯಾರ್ಹತೆಯನ್ನು ಹೊಂದಿಲ್ಲದಿದ್ದಲ್ಲಿ ಅಂತಹವರನ್ನು ರಾಜ್ಯ ವೇತನ ಶ್ರೇಣಿಯಲ್ಲಿಯೇ ಮುಂದುವರೆಸಲಾಗಿದೆ. ಅದರಂತೆ, ದಿನಾಂಕ:31.08.1987 ರಂದು ಜಾರಿಗೆ ಬಂದ 1987ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇಂಜಿನಿಯರಿಂಗ್ ವಿಷಯಗಳಲ್ಲಿ ಸಹಾಯಕ ಉಪನ್ಯಾಸಕರ ವೃಂದ ಅಸ್ತಿತ್ವದಲ್ಲಿರುವುದಿಲ್ಲ.

ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಸಿಸ್ಟಂ ಅನಾಲಿಸ್ಟ್‌ಗಳಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಎಐಸಿಟಿಇ, ನವದೆಹಲಿ ಯಿಂದ ನೀಡಲಾಗಿದ್ದ ಸ್ಪಷ್ಟೀಕರಣವನ್ನು ತಪ್ಪಾಗಿ ಅರ್ಥೈಸಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 62 ಡಿಟಿಇ 2007, ದಿನಾಂಕ:04.02.2009ರಲ್ಲಿ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾಗಿತ್ತು. ತದನಂತರದಲ್ಲಿ ಪ್ರಕರಣವನ್ನು ಮರು ಪರಿಶೀಲಿಸಲಾಗಿ, ಬೋಧಕೇತರ ವೃಂದದ ಸಿಬ್ಬಂದಿಗಳಾದ ಸಿಸ್ಟಂ ಅನಾಲಿಸ್ಟ್‌ಗಳಿಗೆ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲು ಅವಕಾಶವಿಲ್ಲವೆಂಬುದನ್ನು ಮನಗಂಡು, ತಾಂತ್ರಿಕ ಶಿಕ್ಷಣ ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 44 ಇಎಸ್‌ಟಿ 1(ಬಿ) 2005-06, ದಿನಾಂಕ: 19.05.2017ರಲ್ಲಿ ಸದರಿ 02 ಸಿಸ್ಟಂ ಅನಾಲಿಸ್ಟ್‌ಗಳಿಗೆ ವಿಸ್ತರಿಸಲಾಗಿದ್ದ ಎಐಸಿಟಿಇ ವೇತನ ಶ್ರೇಣಿಯನ್ನು ಹಿಂಪಡೆಯಲಾಗಿದೆ. ಇದನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:3235-36/2017ರ ದಿನಾಂಕ:14.01.2020 ಆದೇಶದಲ್ಲಿ ಅರ್ಜಿದಾರರ ಪರವಾಗಿ ನೀಡಿರುವ ತೀರ್ಪನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:2074/2021 ಅನ್ನು ದಾಖಲಿಸಿದ್ದು, ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಮೇಲಿನ ಅಂಶಗಳಂತೆ, ಚಾಲ್ತಿಯಲ್ಲಿರುವ ಎಐಸಿಟಿಇ ನಿಯಮಗಳು ಮತ್ತು ರಾಜ್ಯ ಸರ್ಕಾರದ ಆದೇಶಗಳನ್ವಯ ಬೋಧಕ ವೃಂದದ ಉಪನ್ಯಾಸಕ ಹುದ್ದೆಗಳಿಗೆ ಮಾತ್ರ ಎಐಸಿಟಿಇ ವೇತನ ಶ್ರೇಣಿಗಳನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಗ್ರಂಥಪಾಲಕರ ಹುದ್ದೆಯು ಗ್ರಂಥಾಲಯದ ನಿರ್ವಹಣೆಗಾಗಿ ಮಂಜೂರಾಗಿರುವ 'ಸಿ' ವೃಂದದ ರಾಜ್ಯ ವೇತನ ಶ್ರೇಣಿಯ ಬೋಧಕೇತರ ಹುದ್ದೆಯಾಗಿದ್ದು, ಉಪನ್ಯಾಸಕರ ಹುದ್ದೆಗೆ ತತ್ಸಮಾನವಾಗಿ ಪರಿಗಣಿಸಿ, ಎಐಸಿಟಿಇ ವೇತನವನ್ನು ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

**ಇಡಿ/103/ಟಿಪಿಇ/2024**

**(ಡಾ|| ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಇಲಾಖೆ